ಇ) ಹೌದು, ರಾಜ್ಯದಲ್ಲಿ ಆದ ಬೆಳೆ ನಾಶ ಪರಿಹಾರ ಕುರಿತು ದಿನಾಂಕ 25-3-98 ರಂದು ಕೃಷಿ ಇಲಾಖೆಯು ಮನವಿ ಸಲ್ಲಿಸಿದೆ.

ಈ) ಈ ಸಂಬಂಧ ಕೇಂದ್ರದಿಂದ ಈವರೆವಿಗೂ ಯಾವ ಹೆಚ್ಚಿನ ನೆರವು ಬಂದಿಲ್ಲ.

ವಿಜಾಪುರ ತಾಲ್ಲೂಕಿನಲ್ಲಿ ಸರಕಾರಿ ಜಮೀನನ್ನು ಖಾಸಗಿಯವರಿಗೆ ನೀಡಿರುವುದು

1932 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ತಾಲ್ಲೂಕಿನಲ್ಲಿ ಸರಕಾರಿ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು?*

ಆ) *ವಿಜಾಪುರ ನಗರದ ಸುತ್ತಮುತ್ತಲು ಎಷ್ಟು ಎಕರೆ ಜಮೀನು ಇರುವುದು?*

ಇ) *ಸರಕಾರಿ ಜಮೀನನ್ನು ಖಾಸಗಿಯವರಿಗೆ ನೀಡಲಾಗಿದೆಯೇ, ಹಾಗೆ ನೀಡಿದಲ್ಲಿ ಅವರ ಹೆಸರು ಸಹಿತವಾಗಿ ಯಾವ ಉದ್ದೇಶಗಳಿಗಾಗಿ ನೀಡಲಾಗಿದೆ? (ವಿವರ ನೀಡುವುದು)*

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) :

ಅ) 4348-06 ಎಕರೆಗಳು

ಆ) 957-31 ಎಕರೆಗಳು

ಇ) 0-20 ಗುಂಟೆ ಲೀಸ್ ಮೇಲೆ ಕಲ್ಲುಗಣಿ ಉದ್ದೇಶಕ್ಕಾಗಿ ನೀಡಲಾಗಿದೆ. ಶ್ರೀ ಬಸಪ್ಪ ಶಿದ ಪಡಗಾನೂರು ಸಾ: ವಿಜಾಪುರ ಇವರಿಗೆ ಲೀಸ್ ಮೇಲೆ ಮಂಜೂರು ಮಾಡಲಾಗಿದೆ.

ವಿಜಾಪುರ ನಗರದಲ್ಲಿ ಮನೆಗಳಿಗೆ ಕಂದಾಯ ನಿಗದಿ ಮಾಡುವ ಬಗ್ಗೆ

1933 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಪೌರಾಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ನಗರದಲ್ಲಿಯ ಮನೆಗಳ ಮೇಲಿನ ನಗರಸಭೆಯ ಕರಗಳ ನಿರ್ಧರಣಾ ಕಾರ್ಯ ಪ್ರಾರಂಭವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಮನೆ ಕಂದಾಯವನ್ನು ನಿರ್ಧರಿಸುವ ಅಳತೆಗೋಲುಗಳಾವುವು?*

ಇ) *ಹಾಲಿ ಇರುವ ಕರದ ಮೇಲೆ ಶೇಕಡವಾರು ಹೆಚ್ಚಿಸುವುದರ ಮುಖಾಂತರ ಸರಳ ರೀತಿಯಲ್ಲಿ ಕ್ರಮಕೈಗೊಳ್ಳುವುದೇ?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು) :

ಅ) ಬಂದಿದೆ.